## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 199/2025**

| | | |
|---|---|---|
| ಸಾಕ್ಷಿದಾರರ ಹೆಸರು | : ಇರ್ಫಾನ್ | ಪಿಡಬ್ಲ್ಯೂ ಃ 13 |
| ತಂದೆಯ / ಗಂಡನ ಹೆಸರು | : ಜಿಯಾವುದ್ದೀನ್ | ಪಿಡಬ್ಲ್ಯೂ ಃ 18 |
| ವಯಸ್ಸು | : 38 ವರ್ಷ | |
| ಉದ್ಯೋಗ | : ಆಟೋ ಚಾಲಕ | |
| ವಾಸಸ್ಥಳ | : ಅಮೃತ ಬಡಾವಣೆ | |

**ಸಾಕ್ಷಿಯನ್ನು ಈ ದಿನ ದಿಃ07.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಮೇಲೆ ಹೇಳಿದ ವಿಳಾಸದಲ್ಲಿ ಹಲವು ವರ್ಷಗಳಿಂದ ವಾಸವಿರುತ್ತೇನೆ.

2. ನನ್ನ ಬಳಿ ಒಂದು ಆಟೋ ಇದ್ದು, ಅದರ ನಂಬರ್ **KA** 05 **B** 5019 ಆಗಿರುತ್ತದೆ. ಸದರಿ ಆಟೋವನ್ನು ನಾನು ಜಯಮ್ಮರವರಿಂದ ಖರೀದಿ ಮಾಡಿರುತ್ತೇನೆ. ಸದರಿ ಆಟೋವನ್ನು ನಾನು ಸುಮಾರು 1 ವರ್ಷದವರೆಗೆ ಓಡಿಸಿರುತ್ತೇನೆ. ನಂತರ ನನಗೆ ಆರೋಗ್ಯ ಸರಿ ಇಲ್ಲದ ಕಾರಣ ಸದರಿ ಆಟೋವನ್ನು ಸಲೀಂ ರವರಿಗೆ ಮಾರಾಟ ಮಾಡಿರುತ್ತೇನೆ. ಸದರಿ ಸಲೀಂ ರವರಿಗೆ ನಾನು ವಾಹವನ್ನು ತಮ್ಮ ಹೆಸರಿಗೆ ಮಾಡಿಕೊಳ್ಳುವಂತೆ, ಕೇಳಿಕೊಂಡು ಫಾರಂ ಗೂ ಸಹ ಸಹಿ ಮಾಡಿಕೊಟ್ಟಿರುತ್ತೇನೆ. ಆದರೆ ಅವರು, ಸದರಿ ವಾಹನವನ್ನು ನೊಂದಾಯಿಸಿಕೊಂಡಿರುವುದಿಲ್ಲ.

**3.** ಎರಡು ವರ್ಷಗಳ ನಂತರ ಮಂಡಿ ಪೊಲೀಸ್ ಠಾಣೆಯ ಪೊಲೀಸರು ನನ್ನನ್ನು ಕರೆಸಿದರು. ಪೊಲೀಸರು ನನ್ನ ಆಟೋವನ್ನು ಒಂದು ಕೊಲೆ ಪ್ರಯತ್ನದ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುತ್ತದೆ ಎಂದು ನನಗೆ ತಿಳಿಸಿದರು. ಸದರಿ ಆಟೋವನ್ನು ಸಲೀಂ ರವರು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ಈಗ ನನಗೆ ಸರಿಯಾಗಿ ನೆನಪಾಗುತ್ತಿಲ್ಲ. ಠಾಣೆಯಲ್ಲಿ ನನ್ನ ಬಳಿ ಸಹಿ ಪಡೆದುಕೊಂಡು ಕಳುಹಿಸಿರುತ್ತಾರೆ.

**4.** ನಾನು ಪೊಲೀಸ್ ಠಾಣೆಗೆ ಹೋದಾಗ ನನ್ನ ಆಟೋ ಠಾಣೆಯಲ್ಲಿ ಇತ್ತು. ನನ್ನ ಆಟೋದ ಪೋಟೋವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ ಪೊಟೋವನ್ನು ತೋರಿಸಿ ಆಟೋವನ್ನು ಗುರುತಿಸಲು ಕೇಳಿದಾಗ, ಸಾಕ್ಷಿಯೂ ಪೋಟೋದಲ್ಲಿ ಇರುವ ಆಟೋವನ್ನು ನೋಡಿ ಗುರುತಿಸಿದ್ದು, ಸದರಿ ಪೋಟೋವನ್ನು ನಿಪಿ.14 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲು : ಮಾನ್ಯ ಸರ್ಕಾರಿ ಅಭಿಯೋಜಕರಿಂದ**

**5.** ನಾನು ಪೊಲೀಸ್ ಠಾಣೆಗೆ ಹೋದಾಗ ನನ್ನ ಆಟೋವನ್ನು ಸಲೀಂ, ರೆಹಮತ್ ಉಲ್ಲಾ ಎನ್ನುವವರಿಗೆ ಮಾರಾಟ ಮಾಡಲಾಗಿರುತ್ತದೆ ಎಂದು ಪೊಲೀಸರು ನನಗೆ ತಿಳಿಸಿದರು. ಸದರಿ ನನ್ನ ಆಟೋವನ್ನು ಸುರೇಶ್ ಅಲಿಯಾಸ್ ಸೂರಿ ಎಂದು, ಕೊಲೆ ಮಾಡಲು ಪ್ರಯತ್ನಿಸಲು ಉಪಯೋಗಿಸಿದರ ಬಗ್ಗೆ ಪೊಲೀಸ್ ಠಾಣೆಯಲ್ಲಿ ತಿಳಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ 3 ನೇ ಆರೋಪಿ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

**<u>ಮರು ವಿಚಾರಣೆ ಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**
Sd/-

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**